





# ಮನೆಯಲ್ಲೇ ಹಣತೆ ತಯಾರಿಸಿ ದೀಪ ಹಚ್ಚಿ ಸಂಭ್ರಮಿಸಿ..

**ದೀಪಗಳ ಹಬ್ಬ ದೀಪಾವಳಿಯಲ್ಲಿ ಎಲ್ಲೆಲ್ಲೂ ಸಂಭ್ರಮವೇ. ದೀಪಗಳನ್ನು ಹಚ್ಚಿ, ಆದರ ಪ್ರಭೆಯಲ್ಲಿ ನಿಜವಾದ ಬದುಕನ್ನು ಕಾಣುವ ಉತ್ಸಾಹ ಇರುತ್ತದೆ. ಮನೆಯಲ್ಲಿ ಕೆಲವು ಬೇಡವಾದ ವಸ್ತುಗಳಿಂದ ಸುಂದರವಾಗಿ ವಿಭಿನ್ನವಾಗಿ ದೀಪ ತಯಾರಿಸಿ, ಅಲಂಕರಿಸಿ ಹಬ್ಬವನ್ನು ವಿಭಿನ್ನವಾಗಿ ಆಚರಿಸಬಹುದು.**

■ **ಚಿತ್ರ-ಬರಹ: ಅನುಷಾ ಎನ್. ಕೋರಾ**

*ಬೆಳಗು ಬಾ ಹಣತೆಯನು*
*ನನ್ನೆದೆಯ ಗುಡಿಯಲ್ಲಿ*
*ದಿವ್ಯ ದೀಪಾವಳಿಯ ಶುಭಗಳಿಗೆಯಲ್ಲಿ..*

ಬೆಳಕಿನ ಹಬ್ಬ ದೀಪಾವಳಿಯ ಬಗ್ಗೆ ಕವಿಯೊಬ್ಬರು ಬರೆದಿರುವ ಸುಂದರ ಹಾಡು ಇದು. ದೀಪಾವಳಿ ದೀಪಗಳ ಹಬ್ಬ. ಹಬ್ಬಕ್ಕೆ ದೀಪಗಳನ್ನು ಅಲಂಕರಿಸುವುದೇ ಒಂದು ಸುಂದರ ಸಂಭ್ರಮ. ಮನೆ, ಅಂಗಡಿ, ರಸ್ತೆ ಎಲ್ಲೆಲ್ಲಿಯೂ ದೀಪಗಳದೇ ದರ್ಬಾರು. ದೀಪಗಳ ಜೋಡಣೆ, ದೀಪಗಳ ಅಲಂಕಾರ.. ಇದನ್ನು ನೋಡುವುದೇ ಒಂದು ದೊಡ್ಡ ಸಂಭ್ರಮ. ಕಣ್ಣಿಗೆ ಮನಕ್ಕೆ ಹಿತ ಸಂತೋಷ ಕೊಡುವಂತಹ ದೀಪಗಳನ್ನು ಮನೆಯಲ್ಲೇ ಮಾಡಬಹುದು.

ಪ್ರತಿ ವರ್ಷವು ಎಲ್ಲರಿಗೂ ಹೊಸತರ ಅಲಂಕರಿಸುವುದು ಎಂದರೆ ಮಹಿಳೆಯರಿಗೆ ಎಲ್ಲಿಲ್ಲದ ಸಂತೋಷ. ಎಲ್ಲರಿಗಿಂತಲೂ ವಿಭಿನ್ನವಾಗಿರ ಬೇಕೆನ್ನುವುದೇ ಆಸೆ. ಮನೆಯಲ್ಲಿ ಕೆಲವು ಬೇಡವಾದ ವಸ್ತುಗಳಿಂದ